ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ
ಸ್ಪೇಷಲ್ (ಲೋಕಾ) 06-2014

| | | |
|---|---|---|
| ಸಾಕ್ಷಿದಾರರ ಹೆಸರು | ಃ ಬಿ. ನಾಗೇಶ್ವರರಾವ್ | ಪಿ.ಡಬ್ಲೂ 1 |
| ತಂದೆ ಹೆಸರು | ಃ ರಾಮಚಂದ್ರುಡು | ಸಿ.ಡಬ್ಲೂ 1 |
| ವಯಸ್ಸು | ಃ 59 ವರ್ಷ | |
| ವೃತ್ತಿ | ಃ ವ್ಯವಸಾಯ | |
| ವಾಸಸ್ಥಳ | ಃ ಹಳೇಬೆಳವನೂರು ಗ್ರಾಮ ದಾವಣಗೆರೆ ಗ್ರಾಮ. | |

ಪ್ರಮಾಣ ಮಾಡಿದ ದಿಃ 03-06–2016.
ಮುಖ್ಯ ವಿಚಾರಣೆ ಃ ವಿಶೇಷ ಅಭಿಯೋಜಕರಿಂದ

ನನಗೆ ದಾವಣಗೆರೆ ತಾಲ್ಲೂಕಿನಲ್ಲಿ ಹಳೇಬೆಳವನೂರು ಗ್ರಾಮ ಮತ್ತು ಇತರ ಎರಡು ಗ್ರಾಮಗಳಲ್ಲಿ ಜಮೀನುಗಳು ಇರುತ್ತವೆ. ಇದಲ್ಲದೇ ಈಗ್ಗೆ ಸುಮಾರು 4 ವರ್ಷದ ಹಿಂದೆ ನನ್ನ ಹೆಂಡತಿ ಶ್ರೀಮತಿ ಜಾನ್ಸಿಲಕ್ಷ್ಮಿಗೆ ಸೇರಿದ ಯರನಾಯಕನಹಳ್ಳಿ ಗ್ರಾಮದ 3 ಎಕರೆ ಜಮೀನನ್ನು ತುರ್ಚಘಟ್ಟದ ಶ್ರೀನಿವಾಸ ಮತ್ತು ಅವರ ಕುಟುಂಬದವರಿಗೆ ಕ್ರಯ ಮಾಡಿ ಕೊಟ್ಟಿದ್ದೆವು. ಖರೀದಿದಾರರು ಈ ಜಮೀನಿಗೆ ಸಂಬಂಧಪಟ್ಟಂತೆ ಮೋಜಣಿಮಾಡಿಸಿ ಹದ್ದುಬಸ್ತು ಗುರುತಿಸಿಕೊಡುವಂತೆ ನಮಗೆ ತಿಳಿಸಿದ್ದರು. ಇದರ ಪ್ರಕಾರ ನಾವು ಸಂಬಂಧಪಟ್ಟ ಮೋಜಣಿ ಇಲಾಖೆಗೆ ಈ ಸರ್ವೆ ನಂಬರ್ ಜಮೀನನ್ನು ಮೋಜಣಿ ಮಾಡಿಕೊಡುವಂತೆ ಅರ್ಜಿ ಕೊಟ್ಟಿದ್ದೆವು. ಮೊದಲು ಕೊಟ್ಟಿದ್ದ ಅರ್ಜಿಯನ್ನು ತಹಶೀಲ್ದಾರ್ ಕಛೇರಿಯಲ್ಲಿ ಕಳೆದುಹಾಕಿದ್ದು , ಈ ಬಗ್ಗೆ ಅವರ ಕಛೇರಿಯಲ್ಲಿ ವಿಚಾರಿಸಲಾಗಿ ಇನ್ನೊಂದು ಅರ್ಜಿಯನ್ನು ಕೊಡುವಂತೆ ತಿಳಿಸಿದ್ದು ಆ ಅರ್ಜಿಯನ್ನು ನಾನೇ ದಾವಣಗೆರೆ ತಹಶೀಲ್ದಾರ್‌ರವರಿಗೆ ನೀಡಿದ್ದೆನು. ಆ ಅರ್ಜಿಯನ್ನು ತಹಶೀಲ್ದಾರ್‌ರವರು ಸರ್ವೇಸೂಪರ್‌ವೈಸರ್‌ರವರಿಗೆ ಅಂದರೆ ಆರೋಪಿಗೆ ಕಳುಹಿಸಿದ್ದರು. ನಾನು ಆರೋಪಿಯಲ್ಲಿ ಸ್ಥಳಕ್ಕೆ ಯಾವಾಗ ಬಂದು ಅಳತೆ ಮಾಡುತ್ತೇನೆಂದು ವಿಚಾರಿಸಲಾಗಿ, ಆರೋಪಿಯು ನಾನು ಹಾಗೇ ಸ್ಥಳಕ್ಕೆ ಬರುವುದಿಲ್ಲವೆಂದು ನನಗೆ ಎರಡುಸಾವಿರ ರೂಪಾಯಿ ಕೊಟ್ಟರೆ ಮಾತ್ರ ಸ್ಥಳಕ್ಕೆ ಬರುತ್ತೇನೆಂದು ಹೇಳಿದರು. ನಾನು ಅದೇ ದಿನ ಆರೋಪಿಗೆ ಎರಡುಸಾವಿರ ರೂಪಾಯಿಗಳನ್ನು ಕೊಟ್ಟೆನು. ನಂತರ ಆರೋಪಿಯು ಮೂರು ದಿನಗಳ ನಂತರ ನಮ್ಮ ಜಮೀನಿನ ಬಳಿ ಅಂದರೆ ನನ್ನ ಹೆಂಡತಿ ಮಾರಾಟ ಮಾಡಿದ್ದ ಯರನಾಯಕನಹಳ್ಳಿ ಜಮೀನಿನ ಬಳಿ ಬಂದಿದ್ದರು. ಇದರ ಸರ್ವೆ ನಂಬರು 59

ಇರಬಹುದು, ನನಗೆ ಗೊತ್ತಿಲ್ಲ. ನನ್ನ ಹೆಂಡತಿಗೆ ಸೇರಿದ್ದ ನನ್ನ ಹೆಂಡತಿ ಮಾರಾಟ ಮಾಡಿದ ಜಮೀನನ್ನು ಆರೋಪಿ ಅಳತೆ ಮಾಡಿದರು. ನಂತರ ಅಲ್ಲಿಂದ ಹೊರಡುವಾಗ ಆರೋಪಿ ತಲೆಕೆರೆದುಕೊಂಡು ಇನ್ನೂ ಸ್ವಲ್ಪ ಹಣ ಕೊಡುವಂತೆ ಕೇಳಿದರು ಅದಕ್ಕೆ ನಾನು ಐದುನೂರು ರೂಪಾಯಿಗಳನ್ನು ಆತನಿಗೆ ಕೊಟ್ಟೆನು. ಅದನ್ನು ಆರೋಪಿ ನನ್ನ ಮುಖಕ್ಕೆ ಎಸೆದಿದ್ದು , ಅಲ್ಲೇ ಇದ್ದ ನನ್ನ ಸ್ನೇಹಿತ ತಿಪ್ಪಣ್ಣ ಮತ್ತು ಇತರರು ಇನ್ನೊಂದು ಐದುನೂರು ರೂಪಾಯಿ ಸೇರಿಸಿ ಕೊಟ್ಟು ಹೊರಟು ಹೋಗುವಂತೆ, ಗಲಾಟೆ ಬೇಡವೆಂದು ಹೇಳಿದ್ದರಿಂದ ನಾನು ಒಂದುಸಾವಿರ ರೂಪಾಯಿಯನ್ನು ಆರೋಪಿಗೆ ಕೊಟ್ಟು ಹೊರಟುಹೋದೆನು. ಅದೇ ದಿನ ರಾತ್ರಿ ಆರೋಪಿ ನಮ್ಮ ಹೆಂಡತಿಯ ಜಮೀನು ಕೊಂಡುಕೊಂಡಿದ್ದ ಶ್ರೀನಿವಾಸ್‌ರವರಿಗೆ ಫೋನ್ ಮಾಡಿ ನಿಮಗೆ ರೆಕಾರ್ಡ್ ಬೇಕಾದರೆ ಎರಡುಸಾವಿರ ರೂಪಾಯಿಯನ್ನು ಕೊಡಿ, ಇಲ್ಲದಿದ್ದರೆ ಇವುಗಳನ್ನು ಹರಿದು ಹಾಕುತ್ತೇನೆಂದು ಆತನಿಗೆ ಹೇಳಿದ್ದು , ಸದರಿ ಶ್ರೀನಿವಾಸ್ ನನಗೆ ಫೋನ್ ಮಾಡಿ, ನಿಮ್ಮ ಸರ್ವೇಯರ್ ಈ ರೀತಿ ಹಣ ಕೇಳುತ್ತಿದ್ದಾರೆ, ದಾಖಲೆಗಳನ್ನು ತನಗೆ ನೀಡುವುದು ನಿಮ್ಮ ಕೆಲಸವೆಂದು ನನಗೆ ಹೇಳಿದರು. ನಾನು ಶ್ರೀನಿವಾಸ್‌ರವರಿಗೆ ನಿಮಗೆ ಸೋಮವಾರ ದಾಖಲೆ ಕೊಡಿಸುತ್ತೇನೆಂದು ತಿಳಿಸಿದೆನು.

2) ನನಗೆ ಆರೋಪಿಯ ವರ್ತನೆಯಿಂದ ಬಹಳ ನೋವಾಗಿದ್ದರಿಂದ ನಾನು ಸೋಮವಾರ ಅಂದರೆ ದಿನಾಂಕಃ 30-07-2013 ರಲ್ಲಿ ದಾವಣಗೆರೆ ಲೋಕಾಯುಕ್ತ ಕಛೇರಿಗೆ ಹೋಗಿ ಈ ಎಲ್ಲಾ ಸಂಗತಿಗಳನ್ನು ಲೋಕಾಯುಕ್ತ ಡಿ.ವೈ.ಎಸ್.ಪಿ. ರವರಿಗೆ ತಿಳಿಸಿದೆನು. ಈ ಬಗ್ಗೆ ಏನಾದರೂ ಸಾಕ್ಷಿ ದಾಖಲೆ ಇದೆಯಾ ಎಂದು ವಿಚಾರಿಸಿದ್ದು ನಾನು ಇಲ್ಲಾ ಎಂದು ಹೇಳಿದ್ದರಿಂದ ಅವರು ನನಗೆ ಮೈಕನ್ನು(ಡಿಜಿಟಲ್ ವಾಯ್ಸ್ ರೆಕಾರ್ಡರ್) ಹಾಕಿ ಆರೋಪಿ ಕಛೇರಿಗೆ ಕಳುಹಿಸಿದ್ದು, ನಾನು ಮತ್ತು ನನ್ನ ತಮ್ಮನ ಮಗ ವೆಂಕಟೇಶ ಯಾನೆ ಬಾಬು ಇಬ್ಬರೂ ಅಲ್ಲಿಗೆ ಬೆಳಿಗ್ಗೆ 11-30 ಗಂಟೆಗೆ ಹೋದೆವು. ನಾನು ಆರೋಪಿಯಲ್ಲಿಗೆ ಹೋಗಿ ನೀವು ಕೇಳಿದಂತೆ ಹಣವನ್ನು ಕೊಟ್ಟಿದ್ದರೂ ಏಕೆ ರೆಕಾರ್ಡ್ ಕೊಡುತ್ತಿಲ್ಲವೆಂದು ಕೇಳಿದೆನು. ಅದಕ್ಕೆ ಆರೋಪಿ ನೀವು ಕೊಟ್ಟಿದ್ದ ಹಣ ಎಲ್ಲವನ್ನು ಮೇಲಿನವರಿಗೆ ಕೊಟ್ಟಿದ್ದೇನೆ. ಈಗ ನೀವು ಒಂದುಸಾವಿರ ರೂಪಾಯಿ ಕೊಡಿ , ನೀವೇನು ಬರುವುದು ಬೇಡ ನಿಮ್ಮ ಬಾಬಣ್ಣನನ್ನು ಕಳುಹಿಸಿದರೆ ಸಾಕು ಸಾಯಂಕಾಲ 4 ಗಂಟೆಗೆ ದಾಖಲೆ ಕೊಡುತ್ತೇನೆಂದು ಆರೋಪಿ ಹೇಳಿದರು.

3) ನಾನು ಈ ಎಲ್ಲಾ ಸಂಗತಿಯನ್ನು ಲೋಕಾಯುಕ್ತ ಕಛೇರಿಗೆ ಹೋಗಿ ಅವರಿಗೆ ತಿಳಿಸಿ ಅವರು ಹಾಕಿದ್ದ ವಾಯ್ಸ್ ರೆಕಾರ್ಡರ್‌ನ್ನು ಕೊಟ್ಟೆನು. ಅವರು ಅದನ್ನು ನನಗೆ ಕೇಳಿಸಿ ಅವರು ಕೇಳಿಸಿಕೊಂಡರು. ಇದಾದ ನಂತರ ಲೋಕಾಯುಕ್ತ ಪೊಲೀಸರು ಬೇರೆ ಇಲಾಖೆಯ ಇಬ್ಬರನ್ನು ಅಲ್ಲಿಗೆ ಕರೆಸಿದರು ನಂತರ ನನಗೆ ಸಾವಿರ ರೂಪಾಯಿಯನ್ನು ಹಾಜರ್ಪಡಿಸುವಂತೆ ಹೇಳಿದ್ದು ನಾನು ಐದುನೂರು ರೂಪಾಯಿಗಳ ಎರಡು ನೋಟುಗಳನ್ನು ಹಾಜರು ಮಾಡಿದೆನು. ಲೋಕಾಯುಕ್ತ ಪೊಲೀಸರು ಬೇರೆ ಇಲಾಖೆಯ ಸಾಕ್ಷಿದಾರರನ್ನು ನನಗೆ ಪರಿಚಯಿಸಿದರು ಹಾಗೂ ನನ್ನನ್ನು ಅವರಿಗೆ ಪರಿಚಯಿಸಿದರು. ಅವರನ್ನು ನೆರಳುಸಾಕ್ಷಿಯೆಂದು ಸಹ ತಿಳಿಸಿದರು ಹಾಗೂ ನಾನು ರೆಕಾರ್ಡ್ ಮಾಡಿದ್ದ ಡಿಜಿಟಲ್ ವಾಯ್ಸ್ ರೆಕಾರ್ಡರ್‌ನಲ್ಲಿದ್ದ ಸಂಭಾಷಣೆಗಳನ್ನು ಅವರಿಗೆ ಕೇಳಿಸಿದರು. ಈ ಸಂಭಾಷಣೆಗಳ ಬಗ್ಗೆ ನನ್ನನ್ನು ಸಾಕ್ಷಿದಾರರು ಕೇಳಿದ್ದು ನಾನು ಅದು ಸರಿಯಿದೆಯೆಂದು ನಾನು ತಿಳಿಸಿದೆನು.

4) ನಂತರ ಸುಮಾರು ಒಂದು ಗಂಟೆಯ ಕಾಲ ನೀರಿಗೆ ಏನೋ ಹಾಕಿದ್ದು ಅದರಲ್ಲಿ ಕೈ ಅದ್ದಿಸಿದಾಗ ಗುಲಾಬಿ ಬಣ್ಣ ಬರುತ್ತದೆಂದು ವಿವರಿಸಿ ಹೇಳಿದರು. ಸುಮಾರು ಒಂದೂವರೆ ಗಂಟೆಗಳ ಕಾಲ ಇವುಗಳೆಲ್ಲವನ್ನೂ ಮಾಡಿರುತ್ತಾರೆ. ನಾನು ಐದುನೂರು ರೂಪಾಯಿಯ ಎರಡು ನೋಟುಗಳನ್ನು ಲೋಕಾಯುಕ್ತ ಪೊಲೀಸರ ಟೇಬಲ್ ಮೇಲೆ ಇಟ್ಟಿದ್ದೆನು. ಈ ನೋಟುಗಳಿಗೆ ಏನೋ ಪೌಡರನ್ನು ಹಾಕಿದ್ದರು. ಲೋಕಾಯುಕ್ತ ಇನ್ಸ್‌ಪೆಕ್ಟರ್‌ರವರು ಆ ನೋಟುಗಳನ್ನು ಮುಟ್ಟಿ ಅವರು ತಯಾರು ಮಾಡಿದ್ದ ನೀರಿನೊಳಗೆ ಅದ್ದಿದ್ದರೆ ಗುಲಾಬಿ ಬಣ್ಣ ಬರುತ್ತದೆಂದು ಹೇಳಿದು ನೋಟು ಮುಟ್ಟಿದ್ದ ಎಲ್ಲರ ಕೈಗಳನ್ನು ತೊಳೆಸಿದರು. ಇವುಗಳೆಲ್ಲವನ್ನು ಲೋಕಾಯುಕ್ತ ಕಛೇರಿಯಲ್ಲಿ ರೆಕಾರ್ಡ್ ಮಾಡಿ ಸಿ.ಡಿ. ಮಾಡಿಕೊಂಡರು. ಇದನ್ನು ನಮ್ಮ ಸಮಕ್ಷಮ ಕೇಳಿಸಿ ಸೀಜ್ ಮಾಡಿದರು. ನಂತರ ಈ ಸಂಗತಿ ಎಲ್ಲವನ್ನು ಟೈಪ್ ಮಾಡಿಸಿ ಹೇಳಿ ನಮ್ಮ ಸಹಿ ಮಾಡಿಸಿಕೊಂಡರು. ನಮಗೆ ಎಲ್ಲಾ ಸರಿ ಇದೆಯೆಂದು ತಿಳಿಸಿದ್ದು ನಮ್ಮ ಸಹಿ ಮಾಡಿಸಿಕೊಂಡರು. ನನ್ನ ತಮ್ಮನ ಮಗ ಸಹ ಸಹಿ ಮಾಡಿರುತ್ತಾನೆ. ನೆರಳುಸಾಕ್ಷಿ ಸಹ ಸಹಿ ಮಾಡಿರುತ್ತಾರೆ. ಆ ದಾಖಲೆಯನ್ನು ನೋಡಿದರೆ ಗುರುತಿಸುತ್ತೇನೆ. ಇನ್ನೊಂದು ದಾಖಲೆಯನ್ನು ಲೋಕಾಯುಕ್ತ ಪೊಲೀಸರು ನಾನು ಹೇಳಿದಂತೆ ಟೈಪ್ ಮಾಡಿದ್ದು ನನ್ನ ತಮ್ಮನ ಮಗ ಓದಿ ಹೇಳಿದ್ದು ನಾನು ಇದಕ್ಕೆ ಸಹಿ ಮಾಡಿದೆನು. ಆ

ದಾಖಲೆಯನ್ನು ನೋಡಿದರೆ ಸಹ ಗುರುತಿಸುತ್ತೇನೆ. ಸಾಕ್ಷಿಯು ಸದರಿ ದಾಖಲೆಯನ್ನು, ಪಿರ್ಯಾದನ್ನು ಗುರುತಿಸಿದ್ದು ಇದನ್ನು ನಿಶಾನೆ ಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ-1(ಎ) ಎಂದು ಗುರುತಿಸಲಾಯಿತು. ಮಹಜರನ್ನು ನಿಶಾನೆ ಪಿ-2 ಎಂದು, ಸಾಕ್ಷಿಯು ಗುರುತಿಸಿದ ತನ್ನ ಸಹಿಯನ್ನು ನಿಶಾನೆ ಪಿ-2(ಎ) ಎಂದು ಗುರುತಿಸಲಾಯಿತು.

5) ಪುಡಿ ಸವರಿದ್ದ ನಾನು ಕೊಟ್ಟಿದ್ದ ಐದುನೂರು ರೂಪಾಯಿಯ ಎರಡು ನೋಟುಗಳನ್ನು, ನನ್ನ ತಮ್ಮನ ಮಗನ ಜೇಬಿನಲ್ಲಿ ಲೋಕಾಯುಕ್ತ ಪೊಲೀಸರು ಇಟ್ಟಿರುತ್ತಾರೆ. ನಾನು, ನನ್ನ ತಮ್ಮನ ಮಗ ಹಾಗೂ ನೆರಳುಸಾಕ್ಷಿ ಆರೋಪಿಯ ಕಛೇರಿ ಬಳಿ ಹೋಗಿದ್ದು ನಾನು ಹೊರಗಡೆಯೇ ಇದ್ದೆನು, ನನ್ನ ತಮ್ಮನ ಮಗ ಹಾಗೂ ಆರೋಪಿ ಕಛೇರಿಯ ಒಳಕ್ಕೆ ಹೋಗಿರುತ್ತಾರೆ. ಲೋಕಾಯುಕ್ತ ಪೊಲೀಸರು ಹಾಗೂ ಇನ್ನೊಬ್ಬ ಸಾಕ್ಷಿದಾರ ನಮ್ಮ ಹಿಂಭಾಗದಲ್ಲೇ ಆರೋಪಿ ಕಛೇರಿ ಬಳಿ ಬಂದಿರುತ್ತಾರೆ. ನನ್ನ ತಮ್ಮನ ಮಗ ಆರೋಪಿಯ ಬಳಿ ಹೋಗಿ, ರೆಕಾರ್ಡ್ ಕೊಡುವಂತೆ ಕೇಳಿದ್ದು ಅದಕ್ಕೆ ಆರೋಪಿ ಒಂದುಸಾವಿರ ಕೊಡು ಎಂದು ಆತನನ್ನು ಕೇಳಿದ್ದು ಆತ ಒಂದುಸಾವಿರ ರೂಪಾಯಿಯನ್ನು ಆರೋಪಿಗೆ ಕೊಟ್ಟಿದ್ದು ಆರೋಪಿ ಇದನ್ನು ತೆಗೆದುಕೊಂಡು ತನ್ನ ಪ್ಯಾಂಟಿನ ಜೇಬಿಗೆ ಇಟ್ಟುಕೊಂಡರು. ತಕ್ಷಣವೇ ನನ್ನ ತಮ್ಮನ ಮಗ ತನ್ನ ಮುಖವನ್ನು ಕರ್ಚೀಪಿನಿಂದ ಒರೆಸಿಕೊಂಡಿದ್ದು ಲೋಕಾಯುಕ್ತ ಪೊಲೀಸರು ಅಲ್ಲಿಗೆ ಬಂದು ಆರೋಪಿಯನ್ನು ಹಿಡಿದುಕೊಂಡರು. ಲೋಕಾಯುಕ್ತ ಪೊಲೀಸರು ಮೊದಲೇ ತಿಳಿಸಿದಂತೆ ಆರೋಪಿ ಹಣ ತೆಗೆದುಕೊಂಡರೆ ಮಾತ್ರ ಈ ರೀತಿ ಕರ್ಚೀಪಿನಿಂದ ಮುಖ ಒರೆಸುಕೊಳ್ಳುವಂತೆ ತಿಳಿಸಿದ್ದರು. ಸ್ಥಳದಲ್ಲೇ ಈ ಬಗ್ಗೆ ತಹಶೀಲ್ದಾರರನ್ನು ಕರೆಸಿ ಪಂಚನಾಮೆ ಮಾಡಿದರು. ಆರೋಪಿಯ ಎರಡೂ ಕೈಗಳನ್ನು ದ್ರಾವಣದಲ್ಲಿ ಅದ್ದಿಸಿದ್ದು , ಎರಡೂ ಕೈಬೆರಳುಗಳನ್ನು ಅದ್ದಿಸಿದ್ದ ದ್ರಾವಣ ಗುಲಾಬಿ ಬಣ್ಣಕ್ಕೆ ಬಂದಿತ್ತು. ನಂತರ ಆರೋಪಿ ತೆಗೆದುಕೊಂಡಿದ್ದ ಒಂದುಸಾವಿರ ರೂಪಾಯಿಯನ್ನು ಹಾಜರ್ಪಡಿಸುವಂತೆ ಕೇಳಿದ್ದು ಅದನ್ನು ಆತ ಹಾಜರ್ಪಡಿಸಿರುತ್ತಾರೆ. ಆರೋಪಿಯನ್ನು ಈ ಬಗ್ಗೆ ವಿಚಾರಿಸಲಾಗಿ ಆತ ನಮ್ಮ ಜಮೀನಿಗೆ ಸರ್ವೆ ಮಾಡಲು ಬಂದಿದ್ದ ಸಂಗತಿಯನ್ನು ಒಪ್ಪಿಕೊಂಡರು ಹಾಗೂ ನನ್ನ ತಮ್ಮನ ಮಗನಿಂದ ಹಣ ಪಡೆದುಕೊಂಡ ಸಂಗತಿಯನ್ನು ಸಹ ಒಪ್ಪಿಕೊಂಡರು. ಈ ಬಗ್ಗೆ ಬರವಣಿಗೆ ಮಾಡಿದ್ದು ಸಹಿ ಮಾಡುವಂತೆ ಹೇಳಿದ್ದು ನಾನು ಸಹಿ ಮಾಡಿದೆನು. ಪೊಲೀಸರೇ ಸ್ಥಳದಲ್ಲಿ ಸರ್ವೆ ಸ್ಕೆಚ್ಚನ್ನು ನನಗೆ

ಕೊಡಿಸಿರುತ್ತಾರೆ ಹಾಗೂ ಆರೋಪಿಯಲ್ಲಿದ್ದ ನನಗೆ ಸಂಬಂಧಪಟ್ಟ ದಾಖಲೆಗಳನ್ನು ಸಹ ಅಮಾನತ್ತು ಮಾಡಿಕೊಂಡರು. ಸಾಕ್ಷಿಯು ಸದರಿ ಮಹಜರನ್ನು ಗುರುತಿಸಿದ್ದು ಇದನ್ನು ನಿಶಾನೆ ಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ-3(ಎ) ಎಂದು ಗುರುತಿಸಲಾಯಿತು. ನಾನು ಮತ್ತು ಇತರರು ಈ ದಾಖಲೆಗೆ ಸಹಿ ಮಾಡಿರುತ್ತಾರೆ.

(ಈ ಹಂತದಲ್ಲಿ ನ್ಯಾಯಾಲಯದ ವೇಳೆಯಾದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

ನ್ಯಾಯಾಧೀಶರು,
ವಿಶೇಷ ನ್ಯಾಯಾಲಯ, ದಾವಣಗೆರೆ.

ಸಾಕ್ಷಿಯನ್ನು ಪುನಃ ಕರೆಸಲಾಯಿತು. ಪ್ರಮಾಣ ಮಾಡಿಸಲಾಯಿತು. ದಿನಾಂಕಃ 24-09-2016.
ಮುಂದುವರೆದ ಮುಖ್ಯ ವಿಚಾರಣೆ ಃ ವಿಶೇಷ ಅಭಿಯೋಜಕರಿಂದ

6) ಆರೋಪಿಯಲ್ಲಿದ್ದ ನನ್ನ ದಾಖಲೆಗಳ ದೃಢೀಕೃತ ನಕಲುಗಳನ್ನು ಲೋಕಾಯುಕ್ತ ಪೊಲೀಸರು ಪಡೆದುಕೊಂಡಿರುತ್ತಾರೆ. ಅವುಗಳನ್ನು ನೋಡಿದರೆ ನನಗೆ ಗುರುತಿಸಲು ಆಗುತ್ತದೆ. ಸಾಕ್ಷಿಯು ಸದರಿ ದಾಖಲೆಗಳನ್ನು ಗುರುತಿಸಿದ್ದು ಇದು ದಾಖಲೆ ಸಂಖ್ಯೆ 11 ರಲ್ಲಿದ್ದು , ಪುಟ ಸಂಖ್ಯೆ 32 ರಿಂದ 59 ರವರೆಗೆ ಇರುತ್ತದೆ. ಇದನ್ನು ನಿಶಾನೆ ಪಿ-4 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಪ್ರಾಯೋಗಿಕ ಪಂಚನಾಮೆ ಸಮಯದಲ್ಲಿ ತೆಗೆದಿದ್ದ ಶೀಶೆಯಲ್ಲಿರುವ ಸೋಡಿಯಂ ಕಾರ್ಬೊನೇಟ್ ದ್ರಾವಣದ ಮಾದರಿಯನ್ನು ಅಂದರೆ ಆರ್ಟಿಕಲ್ ನಂ.1ನ್ನು ಗುರುತಿಸಿದ್ದು ಇದನ್ನು ಎಂ.ಓ.1 ಎಂದು ಗುರುತಿಸಲಾಯಿತು ಹಾಗೂ ಪಂಚಸಾಕ್ಷಿ ಎಂ.ಆರ್. ಜಯಪ್ರಕಾಶ್‌ರವರ ಕೈಬೆರಳುಗಳನ್ನು ಪ್ರಾಯೋಗಿಕ ಪಂಚನಾಮೆ ಸಮಯದಲ್ಲಿ ಅದ್ದಿಸಿ ಶೇಖರಿಸಿದ ಸೋಡಿಯಂ ಕಾರ್ಬೊನೇಟ್ ದ್ರಾವಣದ ಶೀಶೆಯನ್ನು ಗುರುತಿಸಿದ್ದು ಇದು ಆರ್ಟಿಕಲ್ ನಂ.2 ಇದ್ದು

ಇದನ್ನು ಎಂ.ಓ.2 ಎಂದು ಗುರುತಿಸಲಾಯಿತು. ಪ್ರಾಯೋಗಿಕ ಪಂಚನಾಮೆ ಸಮಯದಲ್ಲಿ ಡಿಜಿಟಲ್ ವಾಯ್ಸ್ ರೆಕಾರ್ಡರ್‌ನಲ್ಲಿದ್ದ ಸಂಭಾಷಣೆಯನ್ನು ಸಿ.ಡಿ.ಗೆ ವರ್ಗಾಯಿಸಿದ್ದು ಆ ಸಿ.ಡಿ.ಯು ಲಕೋಟೆಯಲ್ಲಿದ್ದು ಇದು ಆರ್ಟಿಕಲ್ ನಂ.3 ಆಗಿದ್ದು ಇದನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಸದರಿ ಸಿ.ಡಿ.ಯನ್ನು ಎಂ.ಓ. 3 ಎಂದು ಹಾಗೂ ಇದರ ವೀಡಿಯೋ ಸಿ.ಡಿ.ಯು ಆರ್ಟಿಕಲ್ ನಂ.4 ಇದ್ದು ಇದನ್ನು ಎಂ.ಓ.4 ಎಂದು ಗುರುತಿಸಲಾಯಿತು. ಟ್ರ್ಯಾಪ್ ಪಂಚನಾಮೆ ಸಮಯದಲ್ಲಿ ಗಾಜಿನ ಬಟ್ಟಲುಗಳಲ್ಲಿ ತಯಾರಿಸಿದ್ದ ಸೋಡಿಯಂ ಕಾರ್ಬೋನೇಟ್ ದ್ರಾವಣದ ಮಾದರಿಯು ಶೀಶೆಯಲ್ಲಿದ್ದು ಇದು ಆರ್ಟಿಕಲ್ ನಂ.5 ಇದ್ದು , ಇದನ್ನು ಎಂ.ಓ.5 ಎಂದು, ಆರೋಪಿ ಬಲಗೈ ಬೆರಳುಗಳನ್ನು ಅದ್ದಿತೊಳೆಸಿದ ಸೋಡಿಯಂ ಕಾರ್ಬೋನೇಟ್ ದ್ರಾವಣ ಇರುವ ಶೀಶೆಯು ಆರ್ಟಿಕಲ್ ನಂ.6 ಇದ್ದು , ಆರೋಪಿ ಎಡಗೈ ಬೆರಳುಗಳನ್ನು ಅದ್ದಿ ತೊಳೆದ ಸೋಡಿಯಂ ಕಾರ್ಬೋನೇಟ್ ದ್ರಾವಣ ಬೇರೆ ಶೀಶೆಯಲ್ಲಿದ್ದು ಇದು ಆರ್ಟಿಕಲ್ ನಂ.7 ಆಗಿದ್ದು , ಇವುಗಳನ್ನು ಎಂ.ಓ.6 ಮತ್ತು 7 ಎಂದು ಗುರುತಿಸಲಾಯಿತು. ನಾನು ಆರೋಪಿಗೆ ನೀಡಿದ್ದ ಒಂದುಸಾವಿರ ರೂಪಾಯಿ ಲಂಚದ ಹಣವನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಯು ಲಂಚದ ಹಣವನ್ನು ತಮ್ಮ ಅಲ್ಮೆರಾದಲ್ಲಿ ಒಂದು ಪೇಪರ್‌ನಲ್ಲಿಟ್ಟಿದ್ದು ಸದರಿ ಪೇಪರನ್ನು ಕತ್ತರಿಸಿ ಒಂದು ಕವರ್‌ನಲ್ಲಿಟ್ಟಿದ್ದು ಇದು ಆರ್ಟಿಕಲ್ ನಂ.9 ಆಗಿದ್ದು , ಇದನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಇದನ್ನು ಎಂ.ಓ.8 ಎಂದು ಗುರುತಿಸಲಾಯಿತು. ಟ್ರ್ಯಾಪ್ ದಿನ ಆರೋಪಿ ಮತ್ತು ಪಿರ್ಯಾದಿ ನಡುವೆ ನಡೆದಿರುವ ಬಟನ್ ಕ್ಯಾಮೆರಾದಲ್ಲಿ ದಾಖಲಾಗಿದ್ದ ಸಂಭಾಷಣೆಯನ್ನು ಸಿ.ಡಿ.ಗೆ ಅಳವಡಿಸಿದ್ದು , ಸದರಿ ಸಿ.ಡಿ.ಯನ್ನು ಒಂದು ಲಕೋಟೆಯಲ್ಲಿಟ್ಟಿದ್ದು ಇದು ಆರ್ಟಿಕಲ್ ನಂ.10 ಆಗಿದ್ದು ಇದನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಸದರಿ ಲಕೋಟೆಯಲ್ಲಿರುವ ಸಿ.ಡಿ.ಯನ್ನು ಎಂ.ಓ.9 ಎಂದು ಗುರುತಿಸಲಾಯಿತು. ಟ್ರ್ಯಾಪ್ ಪಂಚನಾಮೆ ಸಮಯದಲ್ಲಿ ದಾಖಲಿಸಿರುವ ವೀಡಿಯೋ ಸಿ.ಡಿ.ಯನ್ನು ಸಾಕ್ಷಿಯು ಗುರುತಿಸಿದ್ದು ಇದು ಆರ್ಟಿಕಲ್ ನಂ.11 ಎಂದು ಇದನ್ನು ಎಂ.ಓ.10 ಎಂದು ಗುರುತಿಸಲಾಯಿತು. ಇದಲ್ಲದೇ ಟ್ರ್ಯಾಪ್ ಪಂಚನಾಮೆ ಸಮಯದಲ್ಲಿ ಆರೋಪಿಯ ಅಲ್ಮೆರಾದಲ್ಲಿ ಹೆಚ್ಚಾಗಿ ಇದ್ದ ಎರಡು ಐದುನೂರು ರೂಪಾಯಿಯ ನೋಟುಗಳನ್ನು ಸಹ ಅವರು ಸಮರ್ಪಕ ಉತ್ತರ ಕೊಡದ ಕಾರಣ ಜಪ್ತಿ ಮಾಡಿದ್ದು ಇದನ್ನು ನೋಡಿದರೆ ಗುರುತಿಸುತ್ತೇನೆ.

7) ಸಾಕ್ಷಿಯು 'AJ' ಎಂಬ ಇಂಗ್ಲೀಷ್ ಅಕ್ಷರದಿಂದ ಮೇಲಿನ ಮಾಲುಗಳಿಗೆ ಮಾದರಿ ಸೀಲನ್ನು ಹಾಕಿರುತ್ತಾರೆಂದು ಹೇಳಿರುತ್ತಾರೆ ಹಾಗೂ ಮಾದರಿ ಸೀಲಿನ ಹಾಳೆಯನ್ನು ನೋಡಿದರೆ ಗುರುತಿಸುತ್ತೇನೆಂದು ಸಹ ನುಡಿದಿದ್ದು, ಇದನ್ನು ಸಾಕ್ಷಿಯು ಗುರುತಿಸಿದ್ದು ಸದರಿ ದಾಖಲೆಯನ್ನು ನಿಶಾನೆ ಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ-5(ಎ) ಎಂದು ಗುರುತಿಸಲಾಯಿತು.

8) ನಂತರ ಆರೋಪಿಯನ್ನು ಮತ್ತು ಮಾಲುಗಳನ್ನು ಲೋಕಾಯುಕ್ತ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿರುತ್ತಾರೆ. ಇದಕ್ಕೆ ಮುಂಚಿತವಾಗಿ ಸ್ಥಳದಲ್ಲೇ ನಕ್ಷೆ ತಯಾರಿಸಿದ್ದು ಸದರಿ ನಕ್ಷೆಗೆ ನಾನು ಮತ್ತು ಸಾಕ್ಷಿದಾರರು ಸಹಿ ಮಾಡಿರುತ್ತೇವೆ. ಸಾಕ್ಷಿಯು ಇದನ್ನು ಗುರುತಿಸಿದ್ದು, ಈ ನಕ್ಷೆಯನ್ನು ನಿಶಾನೆ ಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ-6(ಎ) ಎಂದು ಗುರುತಿಸಲಾಯಿತು. ನಂತರ ಲೋಕಾಯುಕ್ತ ಪೊಲೀಸರು ನನ್ನ ಹೇಳಿಕೆಯನ್ನು ಮಾಡಿಕೊಂಡಿರುತ್ತಾರೆ. ಇದಲ್ಲದೇ ಆರೋಪಿಯು ತನ್ನ ವಿವರಣೆಯನ್ನು ನೀಡಿರುತ್ತಾರೆ. ಸಾಕ್ಷಿಯು ಆರೋಪಿ ನೀಡಿರುವ ವಿವರಣೆಯನ್ನು ಗುರುತಿಸಿದ್ದು ಇದನ್ನು ನಿಶಾನೆ ಪಿ-7 ಎಂದು ಗುರುತಿಸಲಾಯಿತು. ಅವರು ನೀಡಿದ್ದ ವಿವರಣೆ ಸರಿ ಇರಲಿಲ್ಲ. ಮೇಲೆ ಹೇಳಿದ ಹಣವನ್ನು ನೋಡಿದರೆ ನನಗೆ ಗುರುತಿಸಲು ಆಗುತ್ತದೆ.

ಪಾಟೀ ಸವಾಲು : ಆರೋಪಿ ಪರ ವಕೀಲರಿಂದ ( ಆರೋಪಿ ಪರ ವಕೀಲರು ಕಾಲಾವಕಾಶ ಕೇಳಿದ್ದು ನೀಡಲಾಗಿದೆ).

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

ನ್ಯಾಯಾಧೀಶರು,
ವಿಶೇಷ ನ್ಯಾಯಾಲಯ, ದಾವಣಗೆರೆ.

ಸಾಕ್ಷಿಯನ್ನು ಪುನಃ ಕರೆಸಲಾಯಿತು. ಪ್ರಮಾಣ ಮಾಡಿಸಲಾಯಿತು. ದಿನಾಂಕಃ 15.12.2016.
ಪಾಟೀ ಸವಾಲು ಃ ಆರೋಪಿ ಪರ ಶ್ರೀ ಕೆ.ಎನ್.ಎಸ್. ವಕೀಲರಿಂದ

9) ನಾನು ಮೂಲತಃ ಆಂಧ್ರ ರಾಜ್ಯಕ್ಕೆ ಸೇರಿದವನು ಎನ್ನುವುದು ಸರಿಯಿದೆ. ನಾನು 1966 ನೇ ಇಸ್ವಿಯಲ್ಲಿ ಶಿರಮಗೊಂಡನಹಳ್ಳಿಗೆ ಬಂದಿರುತ್ತೇನೆ. ನಾನು ಇಲ್ಲಿಗೆ ಬಂದ ನಂತರ ರಾಜಕೀಯವಾಗಿ ಸಕ್ರಿಯವಾಗಿದ್ದೆನೆನ್ನುವುದು ಸರಿಯಿದೆ. ನಾನು ಜೆ.ಡಿ.ಎಸ್ ಪಕ್ಷದ ರೈತರ ವಿಭಾಗದ ದಾವಣಗೆರೆ ಜಿಲ್ಲಾ ಅಧ್ಯಕ್ಷನಾಗಿದ್ದೆನು. ನಾನು ಬೇರೆಯವರಿಗೆ ಸಂಬಂಧಪಟ್ಟಂತೆ ಅಂದರೆ ಬೇರೆ ರೈತರಿಗೆ ಸಂಬಂಧಪಟ್ಟಂತೆ ಅವರಿಗೆ ತೊಂದರೆ ಉಂಟಾದಾಗ ಸಹಾಯ ಮಾಡುತ್ತಿದ್ದೆನೆನ್ನುವುದು ಸರಿಯಲ್ಲ. ಹಳೇಬೆಳವನೂರಿನ ಸುತ್ತಮುತ್ತಲ ಪ್ರದೇಶದಲ್ಲಿ ಕೆಲವರು ಕೂಲಿ ಕಾರ್ಮಿಕರ ಪರಿಚಯ ನನಗಿರುತ್ತದೆನ್ನುವುದು ಸರಿಯಿದೆ. ಇಲ್ಲಿನ ರೈತರು ಜಮೀನುಗಳನ್ನು ಮಾರಾಟ ಮಾಡಲಾಗಲೀ ಅಥವಾ ಜಮೀನುಗಳನ್ನು ಕೊಂಡುಕೊಳ್ಳಲಾಗಲೀ ನನ್ನ ಮುಖಾಂತರವೇ ಈ ಕೆಲಸವನ್ನು ಮಾಡುತ್ತಿದ್ದರೆನ್ನುವುದು ಸರಿಯಲ್ಲ. ನನ್ನ ಜೊತೆ ಇಲ್ಲಿನ ಸುತ್ತಮುತ್ತಲಿನ ರೈತರು ವಿಶ್ವಾಸದಿಂದ ಇದ್ದಾರೆ ಎನ್ನುವುದು ಸರಿಯಲ್ಲ.

10) ಆರೋಪಿ-ವೆಂಕಟೇಶ್ ನನಗೆ 5-6 ವರ್ಷಗಳಿಂದ ಪರಿಚಿತರು. ಆರೋಪಿಯ ಮುಖಾಂತರ ನಾನು ಬೇರೆ ರೈತರ ಕೆಲಸ ಕಾರ್ಯಗಳನ್ನು ಮಾಡಿಸಿಕೊಳ್ಳುತ್ತಿದ್ದೆನೆನ್ನುವುದು ಸರಿಯಲ್ಲ. ಆರೋಪಿಯು ನಾನು ಸರ್ವೇ ಕಛೇರಿಗೆ ನನ್ನ ಜಮೀನಿಗೆ ಸಂಬಂಧಪಟ್ಟಂತೆ ಪೋಡಿ ಕೆಲಸಕ್ಕೆ ಹೋದಾಗ ಪರಿಚಯವಾಗಿದ್ದು, ಅಲ್ಲಿ ಆರೋಪಿಯು ಮೋಜಣಿ ಮೇಲ್ವಿಚಾರಕರಾಗಿ ಕೆಲಸ ಮಾಡುತ್ತಿದ್ದಾರೆ. ನನಗೆ ಕನ್ನಡ ಭಾಷೆಯಲ್ಲಿ ಓದಲು ಮತ್ತು ಬರೆಯಲು ಬರುವುದಿಲ್ಲವೆನ್ನುವುದು ಸರಿಯಿದೆ. ನಾನು ಯಾವುದೇ ಅರ್ಜಿಯನ್ನಾಗಲೀ, ದೂರನ್ನಾಗಲೀ ಕಛೇರಿಗೆ ಅಥವಾ ಪೊಲೀಸ್ ಠಾಣೆಗೆ ಸಲ್ಲಿಸಬೇಕಾದಾಗ ಅದನ್ನು ಬೇರೆಯವರಿಂದ ನಾನೇ ಹೇಳಿ ಬರೆಯಿಸಿ ಓದಿ ತಿಳಿದುಕೊಂಡು ಸಹಿ ಮಾಡಿ ನಂತರ ಕೊಡುತ್ತೇನೆ. ನಾನು ಯಾವುದೇ ಅರ್ಜಿ ಅಥವಾ ದೂರನ್ನು ಸಂಬಂಧಪಟ್ಟ ಇಲಾಖೆಗೆ ಕೊಟ್ಟಾಗಿ ಅವರು ಇದಕ್ಕೆ ಸ್ವೀಕೃತಿ ನೀಡುತ್ತಾರೆನ್ನುವುದು ಸರಿಯಿದೆ. ಆರೋಪಿಗೆ ನಾನು ಕೊಟ್ಟಿದ್ದ ಅರ್ಜಿಗೆ ಸಂಬಂಧಪಟ್ಟಂತೆ ಅವರು ಸ್ವೀಕೃತಿ ನೀಡಿದ್ದು ಇದನ್ನು ನಾನು ಲೋಕಾಯುಕ್ತ ಪೊಲೀಸರಿಗೆ ಕೊಟ್ಟಿರುತ್ತೇನೆ. ಇದನ್ನು ನ್ಯಾಯಾಲಯದ ಮುಂದೆ ಹಾಜರ್ಪಡಿಸಿರುತ್ತಾರೋ ಇಲ್ಲವೋ

ನನಗೆ ಗೊತ್ತಿಲ್ಲ. ನಾನು ತಹಶೀಲ್ದಾರ್‌ರವರಿಗೆ ಅರ್ಜಿಯನ್ನು ನೀಡಿದ ಬಗ್ಗೆ ಅವರು ಸ್ವೀಕೃತಿಯನ್ನು ಕೊಟ್ಟಿದ್ದು, ಈ ಸ್ವೀಕೃತಿಯನ್ನು ನಾನು ಲೋಕಾಯುಕ್ತ ಕಛೇರಿಗೆ ನೀಡಿರುತ್ತೇನೆ. ಸದರಿ ಸ್ವೀಕೃತಿಯು ನ್ಯಾಯಾಲಯದ ಮುಂದೆ ಇದ್ದಲ್ಲಿ ನನಗೆ ಗುರುತಿಸಲು ಆಗುತ್ತದೆ. ನಾನು ಜಮೀನುಗಳನ್ನು ಅಳತೆ ಮಾಡಿಸಲು ಅರ್ಜಿಯನ್ನು ತಹಶೀಲ್ದಾರವರಿಗೆ ನೀಡುವುದಿಲ್ಲ. ಈ ಅರ್ಜಿಯನ್ನು ಸರ್ವೇ ಕಛೇರಿಗೆ ಕೊಡುತ್ತೇವೆ. ತಹಶೀಲ್ದಾರವರು ಇನ್ನೊಂದು ಅರ್ಜಿಯನ್ನು ಕೊಡುವಂತೆ ತಿಳಿಸಿದರೆಂದು ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಂಗತಿಯು ಸರಿ ಇರುತ್ತದೆ. ಈ ಅರ್ಜಿಗಳನ್ನು ಪಡೆದುಕೊಂಡ ನಂತರ ಆ ಅರ್ಜಿಗಳು ಯಾವಾಗ ಬಂದಿರುತ್ತದೆಂದು ಪರಿಶೀಲಿಸಿ, ಮುಂಚಿತವಾಗಿ ಬಂದ ಅರ್ಜಿಗಳನ್ನು ಮೊದಲು ಪರಿಗಣಿಸುತ್ತಾರೆನ್ನುವುದು ಸರಿಯಿದೆ. ಆರೋಪಿಯು ಸ್ಥಳಕ್ಕೆ ಬರಲು ಎರಡುಸಾವಿರ ರೂಪಾಯಿ ಕೊಡಬೇಕೆಂದು ಕೇಳಿದರೆಂದು ಹಾಗೂ ನಾನು ಈ ಹಣವನ್ನು ಅವರಿಗೆ ಕೊಟ್ಟಿರುತ್ತೇನೆಂದು ನಾನು ತಹಶೀಲ್ದಾರವರಿಗೆ ತಿಳಿಸಿಲ್ಲ.

11) ಜಮೀನನ್ನು ಅಳತೆ ಮಾಡುವುದಕ್ಕೆ ಮುಂಚಿತವಾಗಿ ಮೋಜಣಿ ಇಲಾಖೆಯವರು ಅಕ್ಕಪಕ್ಕದ ಜಮೀನ್ದಾರರಿಗೆ ನೋಟಿಸು ಕೊಡುತ್ತಾರೆನ್ನುವುದು ಸರಿಯಿದೆ. ನೋಟಿಸು ಕೊಟ್ಟ ನಂತರ ಯಾವ ದಿನ ಮೋಜಣಿದಾರರು ಸ್ಥಳಕ್ಕೆ ಬರುತ್ತಾರೋ ಆ ದಿನ ಸಂಬಂಧಪಟ್ಟ ಜಮೀನಿನ ಮಾಲೀಕರು ಸ್ಥಳದಲ್ಲಿರುವಂತೆ ಈ ನೋಟಿಸಿನಲ್ಲಿ ತಿಳಿಸುತ್ತಾರೆನ್ನುವುದು ಸರಿಯಿದೆ. ಇದೇ ಪ್ರಕಾರ ಆರೋಪಿಯು ನನ್ನ ಜಮೀನಿಗೆ ಅಳತೆಗೆ ಬರುವುದಕ್ಕೆ ಮುಂಚಿತವಾಗಿ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ ನೋಟಿಸು ಕೊಟ್ಟಿದ್ದರು. ಯಾವ ದಿನ ಸ್ಥಳಕ್ಕೆ ಬರುತ್ತೇನೆಂದು ಆ ನೋಟಿಸಿನಲ್ಲಿ ತಿಳಿಸಿದ್ದರೆಂದು ಬಹಳ ದಿನಗಳಾಗಿರುವುದರಿಂದ ನನಗೆ ಈಗ ನೆನಪಿಲ್ಲ. ಸ್ಥಳ ತನಿಖೆಗೆ ಬರುತ್ತೇವೆಂದು ನೀಡಿದ್ದ ನೋಟಿಸನ್ನು ಲೋಕಾಯುಕ್ತ ಪೊಲೀಸರಿಗೆ ನಾನು ಕೊಟ್ಟಿರುವುದಿಲ್ಲ.

12) ಆರೋಪಿಯು ನನ್ನ ಹೆಂಡತಿ ಮಾರಾಟ ಮಾಡಿದ ಜಮೀನನ್ನು ಅಳತೆ ಮಾಡಲು ಸ್ಥಳಕ್ಕೆ ಬಂದಿದ್ದಾಗ ಅಳತೆ ಮಾಡಿ ನಂತರ ಅಲ್ಲಿಂದ ಹೊರಡುವಾಗ ಇನ್ನೂ ಸ್ವಲ್ಪ ಹಣ ಕೊಡುವಂತೆ ಕೇಳಿದ್ದರಿಂದ ನಾನು ಐದುನೂರು ರೂಪಾಯಿಗಳನ್ನು ಅವರಿಗೆ ಕೊಟ್ಟಾಗ ಆತ ಅದನ್ನು ನನ್ನ ಮುಖಕ್ಕೆ ಎಸೆದಿದ್ದು ನಂತರ ಇನ್ನೂ ಐದುನೂರು ರೂಪಾಯಿಗಳನ್ನು ಸೇರಿಸಿ ಆರೋಪಿಗೆ ಕೊಟ್ಟಿದ್ದು ಈ ಎರಡು ಐದುನೂರು ರೂಪಾಯಿಗಳ ನೋಟಿನ ಸಂಖ್ಯೆಯನ್ನು ಈಗ ನನಗೆ ಹೇಳಲು

ಆಗುವುದಿಲ್ಲ. ಆರೋಪಿಯು ಶ್ರೀನಿವಾಸ್‌ರವರಿಗೆ ಫೋನ್ ಮಾಡಿ ನಿಮಗೆ ರೆಕಾರ್ಡ್ ಬೇಕಾದರೆ ಎರಡುಸಾವಿರ ರೂಪಾಯಿಗಳನ್ನು ಕೊಡಿ ಇಲ್ಲದಿದ್ದರೆ ಇವುಗಳನ್ನು ಹರಿದುಹಾಕುತ್ತೇನೆಂದು ತಿಳಿಸಿದ್ದ ಸಂಗತಿಯನ್ನು ತಹಶೀಲ್ದಾರವರಿಗೆ ಹೇಳಿಲ್ಲ. ದಿನಾಂಕಃ 29-02-2012 ರಂದು ಆರೋಪಿಯು ಸೇವೆಯಿಂದ ವಯೋನಿವೃತ್ತಿ ಹೊಂದಿರುತ್ತಾರೆನ್ನುವುದು ನನಗೆ ಆಗ ಗೊತ್ತಿರಲಿಲ್ಲ. ಆರೋಪಿಯನ್ನು ಈ ಪ್ರಕರಣದಲ್ಲಿ ಹಿಡಿದ ನಂತರ ತಹಶೀಲ್ದಾರವರು ಆರೋಪಿಯು ನಿವೃತ್ತರಾದ ನಂತರ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದಾರೆಂದು ತಿಳಿಸಿರುತ್ತಾರೆ.

13) ದಿನಾಂಕಃ 11-07-2012 ರಿಂದ ದಿನಾಂಕಃ 10-07-2013 ರವರೆಗೆ ಆರೋಪಿಯು ಒಂದು ವರ್ಷಕಾಲ ತಾನು ನಿವೃತ್ತನಾದನಂತರ ಗುತ್ತಿಗೆ ಆಧಾರದ ಮೇಲೆ ಈ ಕೆಲಸ ಮಾಡಿರುತ್ತಾರೆನ್ನುವುದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಆರೋಪಿಯು ನಿವೃತ್ತರಾಗುವುದಕ್ಕೆ ಮುಂಚಿತವಾಗಿ ಕುಳಿತುಕೊಳ್ಳುತ್ತಿದ್ದ ಸ್ಥಳದಲ್ಲೇ ನಂತರ ಸಹ ಕುಳಿತಿರುತ್ತಿದ್ದರೆಂದು ನುಡಿದಿರುತ್ತಾರೆ. ನಾನು 2ನೇ ಅರ್ಜಿಯನ್ನು ತಹಶೀಲ್ದಾರವರಿಗೆ ಕೊಟ್ಟಿರುತ್ತೇನೆಂದು ಬಹಳ ದಿನಗಳಾದ್ದರಿಂದ ನನಗೆ ನೆನಪಿಲ್ಲ. ಮೋಜಣಿ ಇಲಾಖೆಯಲ್ಲಿ ಕುಮಾರಿ ಸುನಿತ ಎನ್ನುವವರು ದ್ವಿತೀಯ ದರ್ಜೆ ಗುಮಾಸ್ತರಿದ್ದಾರೆನ್ನುವುದು ನನಗೆ ಗೊತ್ತಿಲ್ಲ. ಮೋಜಣಿದಾರರು ತಯಾರಿಸಿಕೊಟ್ಟ ನಕ್ಷೆ ಮತ್ತು ವರದಿಯನ್ನು ಸದರೀ ಸುನಿತಾರವರೇ ತೆಗೆದುಕೊಂಡು ಪರಿಶೀಲಿಸಿ ನಂತರ ಯಾರಿಗೆ ಕೊಡಬೇಕೋ ಅವರಿಗೆ ಕಳುಹಿಸುತ್ತಾರೆನ್ನುವುದು ಸರಿಯಲ್ಲ. ಸಾಕ್ಷಿಯು ಮುಂದುವರೆದು ತನ್ನ ಅರ್ಜಿಗೆ ಸಂಬಂಧಪಟ್ಟಂತೆ ವಾದಿಯೇ ಇದನ್ನು ಪರಿಶೀಲನೆ ಮಾಡಿದ್ದರೆಂದು ನುಡಿದಿರುತ್ತಾರೆ.

14) ಆರೋಪಿ ಯಾವ ದಿನಾಂಕ ನನ್ನ ಜಮೀನಿಗೆ ಮೋಜಣಿ ಮಾಡಲು ಬಂದಿದ್ದರೆಂದು ನನಗೆ ನೆನಪಿಲ್ಲ. ಬುಳ್ಳಾಪುರ ಗ್ರಾಮದ ರಿ.ಸ.ನಂ.25/1B3 ರಲ್ಲಿ ಒಂದು ಎಕರೆ ಎಂಟೂವರೆ ಗುಂಟೆ ಜಮೀನನ್ನು ದಿನಾಂಕಃ 27-08-2012 ರಂದು ಆರೋಪಿ ಕೊಂಡುಕೊಂಡಿರುತ್ತಾರೆನ್ನುವುದು ನನಗೆ ಗೊತ್ತಿಲ್ಲ. ಈ ಜಮೀನನ್ನು ಆರೋಪಿ ಕ್ರಯಕ್ಕೆ ಪಡೆದುಕೊಳ್ಳುವಾಗ ನಾನು ಹೋಗಿರಲಿಲ್ಲ. ನಾನು ಆರೋಪಿ ಈ ಜಮೀನನ್ನು ಕೊಂಡುಕೊಳ್ಳುವುದಕ್ಕೆ ಮುಂಚಿತವಾಗಿ ನಾನು ಕ್ರಯಕ್ಕೆ ಪಡೆದುಕೊಳ್ಳಲು ಪ್ರಯತ್ನ ಮಾಡಿದ್ದೆನೆನ್ನುವುದು ಸರಿಯಲ್ಲ. ಈ ಕಾರಣದಿಂದ ನನಗೆ ಆರೋಪಿಯ ವಿರುದ್ಧ ದ್ವೇಷ ಬಂದಿರುತ್ತದೆನ್ನುವುದು ಸರಿಯಲ್ಲ. ಬುಳ್ಳಾಪುರದ ರೇವಣಸಿದ್ದಪ್ಪನ ಮಗಳ ಕಡೆಯಿಂದ ನಾನು

ಯಾವುದೇ ಜಮೀನನ್ನು ಕೊಂಡುಕೊಂಡಿಲ್ಲ ಹಾಗೂ ಈ ಜಮೀನಿನ ವಿಸ್ತೀರ್ಣ ಒಂದು ಎಕರೆ ಮೂವತ್ತುಗುಂಟೆ ಇತ್ತೆನ್ನುವುದು, ಇದನ್ನು ಅಳತೆ ಮಾಡಲು ಆರೋಪಿ ಸ್ಥಳಕ್ಕೆ ಬಂದಿದ್ದಾಗ ನಾನು ಕಾಲುವೆಗೆ ಹೋಗಿರುವ ಜಮೀನನ್ನು ಸೇರಿಸಿ ನನಗೆ ಎರಡುಎಕರೆ ಮಾಡಿಕೊಡುವಂತೆ ಆರೋಪಿಗೆ ಕೇಳಿದ್ದೆನೆನ್ನುವುದು ಸರಿಯಲ್ಲ. ಇದಕ್ಕೆ ಸಂಬಂಧಪಟ್ಟಂತೆ ವಿವಾದವು ಘನ ಉಚ್ಛ ನ್ಯಾಯಾಲಯದವರೆಗೆ ಹೋಗಿರುತ್ತದೆನ್ನುವುದು ಸರಿಯಲ್ಲ. 2013ನೇ ಇಸ್ವಿಯಲ್ಲಿ ದಾವಣಗೆರೆಯಲ್ಲಿ ಲಿಂಗಾರೆಡ್ಡಿ ಎನ್ನುವ ಪೊಲೀಸ್ ಅಧೀಕ್ಷಕರು ಕೆಲಸ ಮಾಡುತ್ತಿದ್ದರೆನ್ನುವುದು ಸರಿಯಿದೆ. ಸದರಿ ಲಿಂಗಾರೆಡ್ಡಿಯವರು ಆಂಧ್ರದವರೆನ್ನುವುದು ಸರಿಯಲ್ಲ. ಅವರ ಕುಟುಂಬದವರು ಸುಮಾರು 300 ವರ್ಷಗಳ ಹಿಂದೆಯೇ ಕರ್ನಾಟಕಕ್ಕೆ ಬಂದಿರುತ್ತಾರೆಂದು ನುಡಿದಿರುತ್ತಾರೆ. ಸದರೀ ಲಿಂಗಾರೆಡ್ಡಿಯವರು ಮತ್ತು ನಾನು ತೆಲುಗು ಭಾಷೆಯಲ್ಲಿ ಮಾತನಾಡುತ್ತೇವೆನ್ನುವುದು ಸರಿಯಲ್ಲ. ನನಗೆ ತೆಲುಗು ಭಾಷೆಯಲ್ಲಿ ಮಾತನಾಡಲು ಬರುತ್ತದೆ.

15) ದಿನಾಂಕಃ 30-07-2013 ರಂದು ಆರೋಪಿಯು ನಿವೃತ್ತರಾಗಿ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದರೆನ್ನುವುದು ಸರಿಯಿದೆ. ಸಾಕ್ಷಿಯು ಮುಂದುವರೆದು ತನಗೆ ದಿನಾಂಕಃ 30-07-2013 ರಂದೇ ಸಂಗತಿ ತಮಗೆ ಗೊತ್ತಾಗಿರುತ್ತದೆಂದು ನುಡಿದಿರುತ್ತಾರೆ. ಆರೋಪಿಯು ನಾನು ದಿನಾಂಕಃ 30-07-2013 ರಂದು ಅವರಲ್ಲಿಗೆ ಹೋಗಿ ನನ್ನ ರೆಕಾರ್ಡ್ ಕೇಳಿದಾಗ, ಆರೋಪಿಯು ನಾನು ಕೊಟ್ಟಿದ್ದ ಹಣವನ್ನೆಲ್ಲಾ ಮೇಲಿನವರಿಗೆ ಕೊಟ್ಟಿರುತ್ತೇನೆಂದು ತನಗೆ ಇನ್ನೂ ಒಂದುಸಾವಿರ ರೂಪಾಯಿ ಕೊಡಿ ಎಂದು ಕೇಳಿದ್ದು, ಮೇಲಿನವರಲ್ಲಿ ಯಾರ್‍ಯಾರಿಗೆ ಎಷ್ಟೆಷ್ಟು ಹಣ ಕೊಟ್ಟಿರುತ್ತಾರೆಂದು ನನಗೆ ಹೇಳಿರುವುದಿಲ್ಲ. ನಾನು ಈ ಸಂಗತಿಯನ್ನು ತಹಶೀಲ್ದಾರವರಿಗೆ ತಿಳಿಸಿಲ್ಲ.

16) ನಾನು ಲೋಕಾಯುಕ್ತ ಕಛೇರಿಯಲ್ಲಿ ಹಾಜರ್ಪಡಿಸಿದ ಐದುನೂರು ರೂಪಾಯಿಗಳ ಎರಡುನೋಟುಗಳ ಕ್ರಮಸಂಖ್ಯೆ ಈಗ ನನಗೆ ನೆನಪಿಲ್ಲ. ಅವುಗಳು ಎಷ್ಟನೇ ಇಸ್ವಿಯಲ್ಲಿ ಅಚ್ಚಾಗಿದ್ದವೆಂದು ನನಗೆ ಗೊತ್ತಿಲ್ಲ. ದಿನಾಂಕಃ 30-07-2013 ರಂದೇ ಪ್ರಾಯೋಗಿಕ ಪಂಚನಾಮೆ ಮತ್ತು ಜಪ್ತಿ ಪಂಚನಾಮೆ ಹಾಗೂ ಅದರ ಘಟನೆಗಳು ಅದೇ ದಿನ ಆಗಿರುತ್ತವೆ. ಲೋಕಾಯುಕ್ತ ಕಛೇರಿಯವರು ಆ ದಿನ ಒಟ್ಟು ಎಷ್ಟು ಪಂಚನಾಮೆಯನ್ನು ಮಾಡಿರುತ್ತಾರೆಂದು ನನಗೆ ನೆನಪಿಲ್ಲ. ಯಾವ ಯಾವ ಪಂಚನಾಮೆಯಲ್ಲಿ ಏನೇನು ಬರೆದಿರುತ್ತಾರೆಂದು ನನಗೆ ಗೊತ್ತಿಲ್ಲವೆನ್ನುವುದು ಸರಿಯಿದೆ.

ಜಪ್ತಿ ಪಂಚನಾಮೆ ಸಮಯದಲ್ಲಿ ಆರೋಪಿಯಿಂದ ಅಮಾನತ್ತು ಮಾಡಿಕೊಂಡ ಐದುನೂರು ರೂಪಾಯಿಯ ಎರಡು ನೋಟುಗಳ ನಂಬರ್‌ಗಳನ್ನು ನನಗೆ ಹೇಳಲು ಆಗುವುದಿಲ್ಲ. ಆರೋಪಿ ನನ್ನಲ್ಲಿ ಯಾವುದೇ ಹಣವನ್ನು ನೀಡುವಂತೆ ಕೇಳಿಲ್ಲವೆನ್ನುವುದು ಸರಿಯಲ್ಲ. ಆರೋಪಿ ಮತ್ತು ನನ್ನ ನಡುವೆ ಇರುವ ದ್ವೇಷದಿಂದ ಈ ರೀತಿ ಆರೋಪಿಯ ವಿರುದ್ದ ಸುಳ್ಳು ದೂರು ಕೊಟ್ಟು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆನ್ನುವುದು ಸರಿಯಲ್ಲ. ಆರೋಪಿಗೆ ನಾನು ಯಾವುದೇ ಹಣವನ್ನು ಕೊಟ್ಟಿಲ್ಲವೆನ್ನುವುದು ಸರಿಯಲ್ಲ. ನಾನೇ ಲೋಕಾಯುಕ್ತರಿಗೆ ಹಣ ನೀಡಿ ಈ ಮೊಕದ್ದಮೆಯನ್ನು ಸೃಷ್ಟಿ ಮಾಡಿಸಿಕೊಂಡಿದ್ದೇನೆನ್ನುವುದು ಸರಿಯಲ್ಲ.

ಮರುವಿಚಾರಣೆ : ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

ನ್ಯಾಯಾಧೀಶರು,
ವಿಶೇಷ ನ್ಯಾಯಾಲಯ, ದಾವಣಗೆರೆ.